ರೂಪಾಯಿಗಳ ಬಗ್ಗೆ ಸುಮಾರು ಒಂದು ಕೆ ಲಕ್ಷ ಜನರು ಬರಬಹುದು. ಇವರಿಗೆ ಕಾಂಟ್ರಿಬ್ಯೂಷನ್ ಕೊಡತಕ್ಕಂತಹ ಬಗ್ಗೆ ಕೂಡ ತಾವು ಪರಿಶೀಲನೆ ಮಾಡಬೇಕು.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾಳೆ ನಾನು ಉತ್ತರ ಹೇಳುತ್ತೇನೆ.

ಉಪಾಧ್ಯಕ್ಷರು.—ಸಭೆಯು ಈಗ ಮುಂಕ್ಕಾಯವಾಗಿ ಪುನಃ ಎರಡು ಘಂಟೆಗೆ ಸೇರಲಿದೆ.

[The House re-assembeled at 2-08 P.M.]

[MR. SPEAKER (SRI K. H. RANGANATH) in the Chair]

STARRED QUESTIONS

[To which oral Answeqs were gsven

Pension and Gratuity facilities to Civic employees

37 SRI I. P. D. SALAPPA (Binnypet)—Will the Minister for Housing and Urban Development be pleased to state.—

(a) the reasons for not giving pension and gratuity facilities so far to the Civic employees who have been retired from the Bellary City Municipality ;

(b) whether salaries due every month to the employees of the Town Municipalities of the State and Civic employees are being disbursed ;

(c) whether the Government have proposed to disburse salary directly to them ;

(d) whether the salaries are being disbursed to the employees of Corporations. City Municipalities Town Municipal Councils and town Panchayats in the State and Civic employees through banks ; if so the names of such institutions ,

(e) the names of Municipalities wherein salary is not disbursed through Banks,

(f) whether it is a fact that there are complaints about reduction in salary while making disbursement directly ;

(g) if so, whether the Government have proposed to take any action against those persons who are responsible for making reductions ?

SRI DHARAM SINGH (Minister for Housing & Urban Development.)—

(a) The persion and gratuity are being paid to all the civic employees of Bellary City Municipality to those who have retired subsequent to 22nd May 1972.

(b) Salary is being paid to all Municipalities regularly except the following mentioned municipalities.

Gulbarga	*Bangalore*	*Belgaum*	*Mysore*
Kustagi	Shiralakoppa	Kauzhatigi	Nil
Mudogal	Kumsi	Guled Gudda	
Devadurga	Nyamathi	Hunagunda	
Harapanahalli	N.A.C.	Kamatagi	
Kamalapura	Jog		
	Gudibande		
	Holalkere		

(c) No.

(d) Salary is being disbursed in respect of the following institutions :—

1. Hubli-Dharward Corporation
2. Mysore City Corporation
3. Belgaum City Corporation
4. Manvi Town Municipality in Raichur District.

(e) Salaries in all the Corporations, City Corporations and Town Municipalities are not being disbursed through banks except the institutions stated in Clause (d) above.

(f) So far no complaint has been received in this regard.

(g) This does not arise in view of reply to clause (f) above.

ಶ್ರೀ ಐ. ಪಿ. ಡಿ. ಸಾಲಪ್ಪ.—ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಬಳ್ಳಾರಿ ಸಿಟಿ ಮುನಿಸಿಪಾಲಿಟಿಯಲ್ಲಿ ೨೨ನೇ ಮೇ ೧೯೬೨ರ ನಂತರ ನಿವೃತ್ತಿಯಾದ ಎಲ್ಲ ಪೌರ ಕಾರ್ಮಿಕರಿಗೂ ನಿವೃತ್ತಿ ವೇತನ ಮತ್ತು ಗ್ರಾಚ್ಯುಯಿಟಿಯನ್ನು ಕೊಡಲಾಗುತ್ತಿದೆ ಎಂದು ಹೇಳಿದ್ದೀರಿ. ಆದರೆ ಇನ್ನೂ ೩೨ ಜನರಿಗೆ ಬರಬೇಕಾಗಿದೆ. ಹಳೇ ಮದ್ರಾಸ್ ಪ್ರಾಂತದ ಜಿಲ್ಲೆಗಳಾದ ಬಳ್ಳಾರಿ ಮತ್ತು ಮಂಗಳೂರಿನಲ್ಲಿ ನಿವೃತ್ತಿ ವಯಸ್ಸು ೬೦ ವರ್ಷ ಇತ್ತು, ಅದರ ಪ್ರಕಾರ ಅಲ್ಲಿದ್ದವರು ನಿವೃತ್ತರಾದರು. ಮೈಸೂರು ಸರ್ವಿಸ್ ಕಂಡಿಷನ್ ಪ್ರಕಾರ ನಿವೃತ್ತಿ ವಯಸ್ಸು ೫೫ ವರ್ಷ ಇತ್ತು. ಆ ಪ್ರಕಾರ ನಿವೃತ್ತಿಯಾದವರಿಗೆ ಮಾತ್ರ ನಿವೃತ್ತಿ ವೇತನ ಕೊಟ್ಟಿದ್ದಾರೆ. ಮಂಗಳೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಇನ್ನೂ ಅನೇಕ ಜನರಿಗೆ ಪೆನ್‌ಷನ್ ಸೆಟಲ್ ಆಗಿಲ್ಲ. ಇದಕ್ಕೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ ? ಇನ್ನು ಎಷ್ಟು ದಿವಸದಲ್ಲಿ ಅವರಿಗೆ ಪೆನ್‌ಷನ್ ಕೊಡಲು ಸಾಧ್ಯ.

ಶ್ರೀ ಧರ್ಮಸಿಂಗ್.—ಬಳ್ಳಾರಿ ಮುನಿಸಿಪಾಲಿಟಿಯಲ್ಲಿ ಸಾಧಾರಣವಾಗಿ ಮೊದಲು ನಿವೃತ್ತಿ ಹೊಂದಿದ ಎಲ್ಲ ಪೌರ ಕಾರ್ಮಿಕರಿಗೂ ಪೆನ್‌ಷನ್ ಕೊಡಲಾಗಿದೆ. ಇಲ್ಲಿಯವರೆಗಿನ ಲೆಕ್ಕದ ಪ್ರಕಾರ ೫೯೯ ಮಂದಿ ಪೌರ ಕಾರ್ಮಿಕರಿಗೆ ನಿವೃತ್ತಿ ವೇತನವನ್ನು ಕೊಡಬೇಕಾಗಿತ್ತು. ಆದರಲ್ಲಿ ೨೯೩ ಮಂದಿಗೆ ಕೊಟ್ಟಿದ್ದೇವೆ. ಇನ್ನು ೨೬ ಮಂದಿಗೆ ಕೊಡಬೇಕಾಗಿದೆ. ಅವರು ೧೯೬೨ರಿಂದ ಇದ್ದವರು ಅಲ್ಲ. ಅವರು ೧೯೬೦ರಲ್ಲಿ ನಿವೃತ್ತರಾಗಿರುತ್ತಾರೆ. ಆದ್ದರಿಂದ. ಅದು ಸ್ವಲ್ಪ ತಡವಾಗಿದೆ. ಮಂಗಳೂರು ಮುತ್ತಿತರ ಕಡೆಗಳಲ್ಲಿ ನಿವೃತ್ತಿ ವೇತನವನ್ನು ನೀಡತಕ್ಕ ಕಾರ್ಯಕ್ರಮ ಜಾಗೃತವಾಗಿದೆ. ಈಗ ನಾವು ಎಲ್ಲ ಕೂಡಿ ೨೫೩ ಜನರಿಗೆ ಪೆನ್‌ಷನ್ ಕೊಡುತ್ತಿದ್ದೇವೆ ಮತ್ತು ಇದಕ್ಕೆ ೨ ಕೋಟಿ ೨೧ ಲಕ್ಷ ರೂಪಾಯಿ ಖರ್ಚಾಗುತ್ತಿದೆ. ಹೆಚ್ಚಿನ ಹಣವನ್ನು ಕೂಡ ಒದಗಿಸಿದ್ದೇವೆ.

ಶ್ರೀ ಐ.ಪಿ.ಡಿ. ಸಾಲಪ್ಪ.—ಉಳಿದವರಿಗೆ ಇನ್ನು ಎಷ್ಟು ದಿನಗಳಲ್ಲಿ ಕೊಡುತ್ತೀರಿ ?

ಶ್ರೀ ಧರ್ಮಸಿಂಗ್.—ಈಗಾಗಲೇ ರಾಜ್ಯದಲ್ಲಿರತಕ್ಕ ೮೨ ಪರ್ಸೆಂಟ್ ಪೌರ ಕಾರ್ಮಿಕರಿಗೆ ಪೆನ್‌ಷನ್ ಕೊಡಲಾಗಿದೆ. ಇನ್ನು ೧೮ ಪರ್ಸೆಂಟ್ ಜನರಿಗೆ ಕೊಡಬೇಕಾಗಿದೆ. ಕೊಡುತ್ತಿದ್ದೇವೆ. ಅದಕ್ಕೆ ಹಣವನ್ನು ಕೂಡ ಒದಗಿಸಲಾಗಿದೆ.

SRI K. BHASKAR NAIDU.—Sir. I do not want to dispute the statement of the hon.Minister who says it is the latest information. But I am quite sure, Sir, still about 30 people have to be given. It is not that once the Municipality sends it to the audit, the Municipality's responsibility is over. They have not been paid money. The objection is from the audit side. In the olden days about 30 yeare back they have given their names as 'Ramamma' or 'Ramakka' etc. Now she has changed it to 'Ramakka' or 'Ramamma'. The audit takes an objection and says how can you have 'akka' from 'amma' This is the objection and for that the poor scavanger people who have retired are suffering. I was the President of the Municipality. I have been writing to the Government. They have not done it. I urge the concerned Minister to give me some time in his chamber along with the Municipal Commissioner and the Deputy Commissioner, who is an Administrator and allow me to go to Bellary and get the applications. That will solve the problem. This is the most important problem. I would like the hon.Minister to give me a date. Let him call the Administrator with all the files and I will prove that still 30 people have to be paid. It is only the audit that has objected with the silliest things which they can overlook.

ಶ್ರೀ ಧರ್ಮಸಿಂಗ್.—೧-೪-೧೯೮೧ರ ವರೆಗೆ ಕೇವಲ ೧೬ ಪೌರ ಕಾರ್ಮಿಕರಿಗೆ ಅಲ್ಲಿ ಪೆನ್‌ಷನ್ ಕೊಡಲಾಗಿತ್ತು. ೩೦ಕ್ಕೆ ಕೇಸ್ ಬ್ಯಾಲೆನ್ಸ್ ಇತ್ತು ನಾವು ಬಂದ ಮೇಲೆ ರಾಮಕ್ಕ, ರಾಮ್ಮಮ್ಮ ಎಂದು ರಿಜಿಸ್ಟರ್ ಆಗಿರುವುದನ್ನೆಲ್ಲಾ ಕಂಡೋನ್ ಮಾಡಿ ಪೌರ ಕಾರ್ಮಿಕರ ಹೆಸರು ಯಾವ ರೀತಿ ರಿಜಿಸ್ಟರ್ ಆಗಿದ್ದರೂ ಅವರಿಗೆ ಪೆನ್‌ಷನ್ ಕೊಡಬೇಕೆಂದು ಮಾಡಿದ್ದೇವೆ. ಈ ಬಗ್ಗೆ ಎರಡು ಸಾರಿ ಸಂಬಂಧಪಟ್ಟವರಿಗೆ ಫೋನ್ ಮಾಡಿ ಹೇಳಿದ್ದೇವೆ. ಮತ್ತೇನಾದರೂ ಬಾಕಿ ಇದ್ದರೆ ಅವರನ್ನೇ ಕರೆಸಿ ಮಾತನಾಡಿ ಎಲ್ಲೆಲ್ಲಿ ಕೇಸಂಗಳು ಇವೆ ಎಂಬುದನ್ನು ನೋಡಿ ಮಾಡೋಣ. ಇತ್ತೀಚಿನ ಮಾಹಿತಿ ಪ್ರಕಾರ ೩೧ರಲ್ಲಿ ೨೬ ಜನರಿಗೆ ಮಾತ್ರ ಕೊಡಬೇಕಾಗಿದೆ.

SRI K. BHASKAR NAIDU.—There were 64 people. Out of them 34 have been cleared. May be my number is 30 and the Hon. Minister says it is 27. It may be correct. But I can vow Sir, and definitely say the pension has not reached the pensioner. The sanction might have been there, Government Order might have been there. What is wanted is rupees and paises.

SRI DHARM SINGH.—We are taking action.

SRI K. BHASKAR NAIDU.—I want that pension must be given If you can give me a date and talk to the Deputy Commissioner and Administrator, we can thrash it out,

ಶ್ರೀ ಧರ್ಮಸಿಂಗ್.—ನಾನು ಕೂಡ ಒಂದು ವರ್ಷದ ಹಿಂದೆ ಹೋಗಿ ರಿಜಿಸ್ಟರ್ ನೋಡಿದ ಮೇಲೆ ೨೫ ಪೆಂಡಿಂಗ್ ಕೇಸಸ್ ಉಳಿದಿವೆ ಎಂಬುದು ಗೊತ್ತಾಯಿತು ಅವು ಬಹುಶಃ ವಿಭಾಗಾಧಿಕಾರಿಗಳ ಮಟ್ಟದಲ್ಲಿ ಉಳಿದಿರಬೇಕು. ಆದ್ದರಿಂದ ಅವನ್ನು ತರಿಸಿ ನೋಡುತ್ತೇನೆ. Immediately we will do it.

ಶ್ರೀ ಐ.ಪಿ.ಡಿ. ಸಾಲಪ್ಪ.— ಪೆನ್‌ಷನ್ ಕೊಡಬೇಕಾಗಿರತಕ್ಕ ಪೌರ ಕಾರ್ಮಿಕರು ಬಳ್ಳಾರಿಯಲ್ಲಿ ಮಾತ್ರವಲ್ಲ, ಇಡೀ ರಾಜ್ಯದಲ್ಲಿದ್ದಾರೆ. ಪಕ್ಕದಲ್ಲೇ ದಾವಣಗೆರೆ ಮುನಿಸಿಪಾಲಿಟಿ ಇದೆ. ೧೯೭೨ರಿಂದ ಪೆನ್‌ಷನ್ ಕೊಡುತ್ತೇವೆಂದು ಒಪ್ಪಿಕೊಂಡಿರತಕ್ಕ ಸರ್ಕಾರ ೧೯೮೨ ಆದರೂ ಇನ್ನೂ ಪೂರ್ಣ ಕೊಟ್ಟಿಲ್ಲ. ಕೆಲವು ಕೇಸುಗಳಲ್ಲಿ ಆವತ್ತಿನಿಂದ ಇವತ್ತಿನವರೆಗೂ ಕೊಟ್ಟಿಲ್ಲ. ಅದು ಮಾನ್ಯ ಮಂತ್ರಿಗಳಿಗೂ ಗೊತ್ತಿದೆ ಮತ್ತು ಮುನಿಸಿಪಾಲಿಟಿಗೂ ಗೊತ್ತಿದೆ. ಈ ರೀತಿಯಾಡರೆ ಆ ಮುನಿಸಿಪಾಲಿಟಿ ಹೇಗಿರಬಹುದೆಂಬುದನ್ನು ಊಹಿಸಬಹುದು. ಬೆಂಗಳೂರು ಸಿಟಿ ಕಾರ್ಪೊರೇಷನ್ನಿನಲ್ಲಿ ೨ ಸಾವಿರ ಪೌರ ಕಾರ್ಮಿಕರ ಪೆನ್‌ಷನ್ ಆನ್ನು ಸೆಟಲ್ ಮಾಡಲಾಗಿದೆ. ಆದರೆ ಬೇರೆ ಮುನಿಸಿಪಾಲಿಟಿಗಳಲ್ಲಿ ಆ ರೀತಿ ಮಾಡಿಲ್ಲ. ಆದ್ದರಿಂದ, ಬೆಂಗಳೂರಿನದನ್ನು ಮಾತ್ರ ದಯವಿಟ್ಟು ಲೆಕ್ಕಕ್ಕೆ ಸೇರಿಸಬೇಡಿ. ಬೆಂಗಳೂರನ್ನು ಬಿಟ್ಟು ಉಳಿದ ಸಿಟಿ ವ ಮುನಿಸಿಪಾಲಿಟಿಗಳ ಮತ್ತು ಹೊಸದಾಗಿ ಆಗಿರತಕ್ಕ ಕಾರ್ಪೊರೇಷನ್‌ಗಳಲ್ಲಿ ಪೆನ್‌ಷನ್ ಸೆಟಲ್ ಮಾಡಿರತಕ್ಕ ಲೆಕ್ಕವನ್ನು ಹೇಳಿ.

ಅಧ್ಯಕ್ಷರು.—ನೀವು ಬಳ್ಳಾರಿ ಮುನಿಸಿಪಾಲಿಟಿಗೆ ಸಂಬಂಧಪಟ್ಟ ಹಾಗೆ ಪ್ರಶ್ನೆ ಕೇಳಿದ್ದೀರಿ ಈಗ ಇಡೀ ರಾಜ್ಯದ ಲೆಕ್ಕವನ್ನೆಲ್ಲ ಕೇಳಿದರೆ ಹೇಗೆ ಹೇಳುತ್ತಾರೆ ?

ಶ್ರೀ ಐ.ಪಿ.ಡಿ. ಸಾಲಪ್ಪ.—ಇದು ಒಂದು ಬರ್ನಿಂಗ್ ಪ್ರಾಬ್ಲಂ ಆಗಿದೆ. ಪ್ರತಿನಿತ್ಯ ಆ ಕಾರ್ಮಿಕರು ಇವತ್ತಲ್ಲ ನಾಳೆ ನಮ್ಮ ಸಮಸ್ಯೆ ಬಗೆಹರಿಯಬಹುದೆಂದು ಕಾಯುತ್ತಿದ್ದಾರೆ. ಅವರನ್ನು ಸಾಯಿಸುತ್ತೀರೋ ಅಥವಾ ಪೆನ್‌ಷನ್ ಕೊಡುತ್ತೀರೋ ?

ಶ್ರೀ ಧರ್ಮಸಿಂಗ್.— ಆ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಹೇಳಿದರೂ ಕೂಡ ಪುನಃ ಪುನಃ ಕೇಳುತ್ತಿದ್ದೀರಿ. ೧೯೭೨ ರಿಂದ ೧೯೮೦ರವರೆಗೆ ೧೨೩ ಜನ ಪೌರ ಕಾರ್ಮಿಕರಿಗೆ ಮಾತ್ರ ಪೆನ್‌ಷನ್ ಕೊಡಲಾಗಿತ್ತು. ಕೇವಲ ೨ ವರ್ಷಗಳಲ್ಲಿ ನಾವು ೨೮೩ ಜನರಿಗೆ ಕೊಟ್ಟಿದ್ದೇವೆ. ಮತ್ತು ಅದಕ್ಕಾಗಿ ೨೨೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ೧೯೭೯-೮೦ರಲ್ಲಿ ೨೫ ಲಕ್ಷ ರೂಪಾಯಿಗಳನ್ನು, ೧೯೮೦-೮೧ರಲ್ಲಿ ೭೪ ಲಕ್ಷ ರೂಪಾಯಿಗಳನ್ನು ಮತ್ತು ೧೯೮೧-೮೨ರಲ್ಲಿ ೨೦೫ ಲಕ್ಷ ರೂಪಾಯಿಗಳನ್ನು ಈ ಒಂದು ಬಾಬಿಗಾಗಿ ಒದಗಿಸಿದ್ದೇವೆ.

ಶ್ರೀ ಎಂ. ಚಂದ್ರಶೇಖರ್.— (ಆ) ಪ್ರಶ್ನೆಗೆ ಉತ್ತರವಾಗಿ ೧೩ ಮುನಿಸಿಪಾಲಿಟಿಗಳಲ್ಲಿ ಸಂಬಳ ಬಟವಾಡೆಯಾಗುತ್ತಿಲ್ಲವೆಂದು ಹೇಳಿದ್ದೀರಿ. ಆದರೆ ಆ ಜನ ಯಾವ ರೀತಿ ಜೀವನ ಮಾಡುತ್ತಿದ್ದಾರೆ ಮತ್ತು ಇದಕ್ಕೆ ಕಾರಣವೇನು? ಎರಡನೆಯದಾಗಿ, ಹುಬ್ಬಳ್ಳಿ-ಧಾರವಾಡ ಮತ್ತಿತರ ಕೆಲವು ಕಡೆಗಳಲ್ಲಿ ಮಾತ್ರ ಬ್ಯಾಂಕ್ ಮುಖಾಂತರ ಸಂಬಳ ವಿತರಣೆ ಮಾಡುತ್ತಿದ್ದೇವೆ, ಮಿಕ್ಕ ಕಡೆಗಳಲ್ಲಿ ಮಾಡುತ್ತಿಲ್ಲವೆಂದು ಹೇಳಿದ್ದೀರಿ. ಬ್ಯಾಂಕ್ ಮೂಲಕ ಸಂಬಳ ವಿತರಣೆ ಮಾಡುವುದರಿಂದ ಸಂಬಳದ ದಿವಸ ಆಟೆಂಡನ್ಸ್ ಹಾಕಿಸಿ ಅವರಿವರ ಕೈಗೆ ಹಣ ಹೋಗುವುದು ತಪ್ಪುತ್ತದೆ ಮತ್ತು ಯಾರಿಗೆ ನೇರವಾಗಿ ಹಣತಲುಪಬೇಕೋ ಅವರಿಗೆ ತಲುಪುತ್ತದೆ. ಆದ್ದರಿಂದ, ಇತರ ಎಲ್ಲಾ ಪುರಸಭೆ ಮತ್ತು ನಗರಸಭೆಗಳಲ್ಲಿ ಕೂಡ ಬ್ಯಾಂಕ್ ಮೂಲಕವೇ ಸಂಬಳವನ್ನು ಬಟವಾಡೆ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಧರ್ಮಸಿಂಗ್.—ಕೆಲವು ಪುರಸಭೆಗಳಲ್ಲಿ ಮತ್ತು ನಗರಸಭೆಗಳಲ್ಲಿ ಆಕ್ಟ್ಯುಯ್ ಆನ್ನು ಅಬಾಲಿಷ್ ಮಾಡಿದ ಮೇಲೆ ಸಾಕಷ್ಟು ಹಣ ಇಲ್ಲದೆ ತೊಂದರೆಯಾಗಿದೆ. ಆದ್ದರಿಂದ, ಎಲ್ಲಾ ಕಡೆಯೂ ಬ್ಯಾಂಕ್ ಮೂಲಕ ಸಂಬಳ ಬಟವಾಡೆ ಮಾಡಲು ಆಗುತ್ತಿಲ್ಲ. ೪ ಊರು ನಗರಸಭೆಗಳಲ್ಲಿ ಮತ್ತು ಒಂದೆರಡು ಪುರಸಭೆಗಳಲ್ಲಿ ಮಾತ್ರ ಈ ವ್ಯವಸ್ಥೆ ಮಾಡಿದ್ದೇವೆ. ಬ್ಯಾಂಕ್ ಮೂಲಕ ಬಟವಾಡೆ ಮಾಡಬೇಕೆಂದರೆ ಪುರಸಭೆ ಮತ್ತು ನಗರಸಭೆಗಳಲ್ಲಿ ಹಣಕಾಸು ಚೆನ್ನಾಗಿರಬೇಕಾಗುತ್ತದೆ.

ಶ್ರೀ ಎಂ. ಚಂದ್ರಶೇಖರ್.— ಬ್ಯಾಂಕಿನ ಮೂಲಕ ಕೊಡಿಸುವ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಧರ್ಮಸಿಂಗ್,— ಅದರ ಬಗ್ಗೆ ವಿಚಾರ ಮಾಡಿಲ್ಲ, ನೋಡೋಣ, ಆ ಬಗ್ಗೆ ಪರಿಶೀಲನೆ ಮಾಡೋಣ.

ಶ್ರೀ ಐ.ಪಿ. ಡಿ. ಸಾಲಪ್ಪ.—ಸಂಬಳಗಳನ್ನು ಕೊಡುವಾಗ ಬಡವರ ಸಂಬಳಗಳಲ್ಲಿ ಹಣ ಮುರಿಯುತ್ತಾರೆ. ಇದನ್ನು ತಪ್ಪಿಸುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು, ಇಲ್ಲದಿದ್ದರೆ ಬಡವರು ಉಳಿಯುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಚಂದ್ರಶೇಖರ್ ಅವರು ಈ ವಿಷಯವನ್ನು ಬಹಳ ಗುಪ್ತವಾಗಿ ಹೇಳಿದರು. ದುಡ್ಡು ಕೊಡದೇ ಹೋದರೆ ಆ ದಿನದ ಅಟೆಂಡೆನ್ಸ್ ಸಿಗುವುದಿಲ್ಲ, ಆ ರೀತಿ ಅವರ ಮೇಲೆ ಒತ್ತಡ ತಂದು ಒಬ್ಬೊಬ್ಬರಿಂದ ೧೫೦ ರೂಪಾಯಿಗಳನ್ನು ಬಲವಂತ ಮಾಡಿ ಕಿತ್ತುಕೊಳ್ಳುತ್ತಿದ್ದಾರೆ. ಇದು ಮಾನ್ಯ ಮಂತ್ರಿಗಳಿಗೂ ಗೊತ್ತಿದೆ. ಆದ್ದರಿಂದ ದಯವಿಟ್ಟು ಇದನ್ನು ತಪ್ಪಿಸುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಧರ್ಮಸಿಂಗ್.— ಮಾನ್ಯ ಸಾಲಪ್ಪನವರೂ ಕೂಡ ಒಂದು ಸಂಘದ ಅಧ್ಯಕ್ಷರಾಗಿದ್ದಾರೆ. ೮-೧೦ ಸಲ ಸಂಘದ ಮುಖಾಂತರ ಅವರು ಭೇಟಿ ಮಾಡಿದ್ದಾರೆ.

ಅಧ್ಯಕ್ಷರು —ಹಣ ತೆಗೆದುಕೊಳ್ಳುವುದು ನಿಮಗೂ ಗೊತ್ತಿದೆ ಎಂದು ಮಾನ್ಯ ಸದಸ್ಯರು ಹೇಳಿದರಲ್ಲಾ ನಿಮಗೂ ಗೊತ್ತಿದೆಯೆ?

ಶ್ರೀ ಧರ್ಮಸಿಂಗ್.— ಹೌದು. ಆದರೆ ಯಾರಾದರೂ ಅಧಿಕಾರಿಗಳು ಆ ರೀತಿ ಮಾಡಿದ್ದನ್ನು ನನ್ನ ಗಮನಕ್ಕೆ ತಂದರೆ ನಾನು ತಕ್ಷಣ ಸಸ್ಪೆಂಡ್ ಮಾಡುತ್ತೇನೆ. ನಿರ್ದಿಷ್ಟವಾಗಿ ಇಂಥ ಅಧಿಕಾರಿಗಳು ತಪ್ಪು ಮಾಡಿದ್ದಾರೆ ಎಂಬುದನ್ನು ನನ್ನ ಗಮನಕ್ಕೆ ತಂದರೆ...

ಶ್ರೀ ಪಿ. ರಾಮ್‌ದೇವ್.— ಹಾದರ, ಲಂಚ, ಇದನ್ನೆಲ್ಲಾ ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ. ತಮಗೆ ಹೇಗೂ ಗೊತ್ತಿರುವುದರಿಂದ ನೇರವಾಗಿ ಚೆಕ್ ಸಿಸ್ಟಂ ಮೂಲಕ ಸಂಬಳವನ್ನು ಕೊಡುವ ಏರ್ಪಾಡು ಮಾಡಿ.

ಶ್ರೀ ಧರ್ಮಸಿಂಗ್.— ನಿರ್ದಿಷ್ಟವಾಗಿ ಇಂಥ ಕಡೆ ಈ ರೀತಿ ಮಾಡಿದ್ದಾರೆ ಎಂಬುದನ್ನು ನನ್ನ ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳುತ್ತೇನೆ.

Minor Irrigation Works undertaken in Virajpet Taluk.

71. SRI G. K. SUBBAIAH (Virajpet).— Will the Minister for Transport and Minor Irrigation be pleased to state.—

(a) the number of Minor Irrigation Works undertaken around Virajpet taluk between 1972 to 1980;

(b) the number of Minor Irrigation Works received by the Government;

(c) out of them, the number of works prepared on priority list and sent to Government;

(d) the amount sanctioned to them;

(e) the amount sanctioned for the supply of water to the Marur Village by constructing a bund across the stream flowing at Thithimathi Village during 1980-81 and the quantum of work done?

SRI M. M. J. SADYOJATHA (Minister for Transport and Minor Irrigation).—

(a) Twenty Minor Irrigation works have been done.

(b) Six Minor Irrigation Works are received by the Government.